## ಅನಾಮಿಕ ಕಲಾವಿದರು

ಕನ್ನಡದ ಬಹಳಷ್ಟು ಧಾರಾವಾಹಿಗಳು ದಿನ ಪೂರ್ತಿ ಪ್ರಸಾರ ಆಗುತ್ತಲೇ ಇರುತ್ತವೆ. ಕಿರುತೆರೆಯ ಸಾಕಷ್ಟು ನಟ ನಟಿಯರು ನಿತ್ಯವೂ ತಮ್ಮದೇ ಆದ ಶೈಲಿಯಲ್ಲಿ ನಟಿಸುತ್ತಲೇ ಇದ್ದಾರೆ. ಕಥೆಯ ಜೀವಾಳವೇ ಆಗಿರುವ ಪಾತ್ರಗಳನ್ನು ಮಾಡಿದವರ ಹೆಸರುಗಳೇ ಗೊತ್ತಾಗುವುದಿಲ್ಲ.

ಒಂದು ಕಂತಿನ ಸರಾಸರಿ ಸಮಯ ಮೂವತ್ತು ನಿಮಿಷ ಆದ್ರೂ, ಮುಂದಿನ ಸಂಚಿಕೆಯಲ್ಲಿ ಸಾಲದು ಎಂಬಂತೆ ಹತ್ತುನಿಮಿಷದ ಜಾಹೀರಾತುಗಳ ಭರಾಟೆಯ ನಡುವೆ ಕೇವಲ ಹತ್ತು ನಿಮಿಷದ ಕಥೆ ಪ್ರಸಾರ ಮಾಡುತ್ತಾರೆ. ನಿರ್ದೇಶಕರ ಹೆಸರನ್ನು ಹಾಕುತ್ತಾರೆ. ಸಂಚಿಕೆಯ ನಟ ನಟಿಯರ ಹೆಸರುಗಳನ್ನೂ ಟೈಟಲ್ ಮಾದರಿಯಲ್ಲಿ ತೋರಿಸಿದರೆ ನಟಿಸುತ್ತಿರುವ ಅವರಿಗೂ ಮಾನ್ಯತೆ ನೀಡಿದಂತೆ ಆಗುತ್ತದೆ. ವೀಕ್ಷಕರಿಗೂ ಅವರ ನಿಜ ನಾಮಧೇಯವಾದರೂ ಗೊತ್ತಾಗುತ್ತದೆ.

—ಆರ್. ವೀರೇಶ್ ಕುಮಾರ್, ಬೆಂಗಳೂರು

## ಲಿಂಗಧಾರಣೆಗೆ ಲಿಂಗ ಭೇದ ಇಲ್ಲ

ಸ್ಟಾರ್ ಸುವರ್ಣದ 'ಯಡಯೂರು ಶ್ರೀಸಿದ್ದಲಿಂಗೇಶ್ವರ' ಪರಂಪರೆಯ ಪ್ರಜ್ಞೆ ಮೀರದೆ ಇರಲಿ. ಬೈತಲಿಯಲ್ಲಿ ಕುಂಕುಮ ಇಡುವ ಪದ್ಧತಿ ಎಲ್ಲಿಯದು? ಹೆಣ್ಣುಮಕ್ಕಳ ಕೊರಳಲ್ಲಿ ಲಿಂಗು ಏಕಿಲ್ಲ? ಜ್ಞಾನಂಬೆ ಅಲ್ಲದೇ ಎಲ್ಲಾ ಮಹಿಳೆಯರು ತಲೆಯಲ್ಲಿ ಹೂವಿನ ಮಾಲೆ ಏಕೆ? ಒಟ್ಟಿನಲ್ಲಿ ಧಾರಾವಾಹಿ ಬೇಸರ ತರಿಸುತ್ತಿದೆ. ಆದರೆ ಆ ಸಿದ್ಧಲಿಂಗೇಶ್ವರ ಕೃಪೆ ಮುಂದೆ ಕುತೂಹಲವನ್ನೂ ಭಕ್ತಿಯನ್ನು ತರಿಸಬಹುದೆಂದು ನೋಡುತ್ತಿದ್ದೇವೆ.

—ಬಸವರಾಜ ಹರಿಹರ, ಧಾರವಾಡ

## ಡ್ಯಾನ್ಸ್ ಎಂಬ ಸರ್ಕಸ್

ಝೀ ಕನ್ನಡದ 'ಡ್ಯಾನ್ಸ್ ಕರ್ನಾಟಕ ಡ್ಯಾನ್ಸ್' ಹೊಸ ಸರಣಿಗೆ ಸ್ಪರ್ಧಿಗಳ ಆಯ್ಕೆ ಪ್ರಸಾರವಾಗುತ್ತಿದೆ. ಬಹುತೇಕ ಎಲ್ಲ ಸ್ಪರ್ಧಿಗಳೂ ಲಾಗ ಹಾಕುವುದು, ಹಾರಿ ಹಾರಿ ಬೀಳುವುದು, ಕೈ ಕಾಲು ಒಂದರೊಳಗೊಂದು ಸೇರಿಸುವುದು, ತಲೆ ಕೆಳಗೆ ಕಾಲು ಮೇಲೆ ಮಾಡಿ ಗರಗರ ತಿರುಗುವುದು ಇಂತಹ ಭಂಗಿಗಳನ್ನೇ ನೃತ್ಯದ ಮುನ್ನುಡಿಯೆಂದು ಭಾವಿಸಿದಂತಿದೆ. ಅತಿ ಹೆಚ್ಚು ಲಾಗ ಹಾಕಿ ಅಷ್ಟಾವಕ್ರರಂತೆ ಮೈ ಕೈ ತಿರುಗಿಸಿದವರನ್ನೇ ಆಯ್ಕೆ ಮಾಡುತ್ತಿದ್ದಾರೆ. ಇದು ನರ್ತನ ಹೇಗಾದಿತು?

ಸ್ಪರ್ಧಿಯೊಬ್ಬರ ಮಾವ 'ತನ್ನ ಸೊಸೆಗೆ ನರ್ತನ ಶಾಲೆಯವರು ನೃತ್ಯವೊಂದೇ ಸಾಲದು ಮೊದಲು ಜಿಮ್ನಾಸ್ಟಿಕ್ ಕಲಿಸಿ' ಎಂದು ಹೇಳಿದ್ದನ್ನು ಹೇಳಿದರು. ಪುಟ್ಟ ಪುಟ್ಟ ಮಕ್ಕಳು ಶೋನಲ್ಲಿ ಪಾಲ್ಗೊಳ್ಳಲು ಜೀವವನ್ನೇ ಪಣವಾಗಿಟ್ಟು ಹಾರಿ ಬೀಳುವುದು ಸರಿಯೇ? ಆಯೋಜಕರು ದಯವಿಟ್ಟು ಯೋಚಿಸಿ.

—ಕೆ. ಲೀಲಾಶ್ರೀನಿವಾಸ್, ಹರಪನಹಳ್ಳಿ

ವಾರದ ಪತ್ರ

## ಪತ್ರ ಓದಿಗೆ ಪ್ರೇರಕ

ಚಂದನದಲ್ಲಿ ಶತಮಾನದ ಸಣ್ಣ ಕತೆಗಳ ಚಿತ್ರ ರೂಪಕಗಳನ್ನು ಕಥೆಗಾರ ಮತ್ತು ಕಥಾ ಸರಿತ ಕಾರ್ಯಕ್ರಮಗಳಲ್ಲಿ ಪ್ರಸಾರ ಮಾಡುತ್ತಿದೆ. ಆ ಮೂಲಕ ಕನ್ನಡ ಉತ್ತಮ ಕಥೆಗಳನ್ನು ಪರಿಚಯಿಸುವ ಮತ್ತು ಕನ್ನಡದ ಕಥಾ ಸಾಹಿತ್ಯವನ್ನು ಓದುಗರ ಮುಂದೆ ತೆರೆದಿಡುವ ಒಂದು ಉತ್ತಮ ಪ್ರಯತ್ನ ಮಾಡುತ್ತಿದೆ. ಇತ್ತೀಚೆಗೆ ಕೊರಡ್ಕಲ್ ಶ್ರೀನಿವಾಸರಾಯರ ಕಥೆ 'ಧನಿಯರ ಸತ್ಯನಾರಾಯಣ' ಕಿರು ಚಿತ್ರವನ್ನು ಪ್ರಸಾರ ಮಾಡಿತು.

ಶೋಷಿತ, ದುರ್ಬಲ ವರ್ಗದ ಜನರು, ಅವರ ಮಕ್ಕಳು ಧನಿಕರಿಂದ ಅನುಭವಿಸಿದ ದೌರ್ಜನ್ಯದ ಮತ್ತು ಸಂಕಟಗಳ ಸುಂದರ ನಿರೂಪಣೆಯ ನೈಜ ಚಿತ್ರ. ಮಕ್ಕಳು ಆಸೆ ಪಟ್ಟು ಅಜ್ಜಿಯ ಮನೆಯಿಂದ ಬಾಳೆ ತರುಗಳನ್ನು ತಂದು ನೆಟ್ಟು ಪೋಷಿಸಿ ಅವು ಗೊನೆ ಬಿಟ್ಟಾಗ ಮಕ್ಕಳಿಗೆ ಸ್ವರ್ಗವೇ ಇಳಿದು ಬಂದು ತಮ್ಮ ಮನೆಯ ಮುಂದೆ ನಿಂತಂತೆ ಭಾಸವಾಗುತ್ತದೆ. ಧನಿಕ ನಾಗಪಯ್ಯ ಬಂದು ಬಾಳೆಯ ಗೊನೆಗಳನ್ನು ತಮ್ಮ ಮನೆಯಲ್ಲಿ ನಡೆಯುವ ಸತ್ಯ ನಾರಾಯಣ ಪೂಜೆಗೆ ಕಳಿಸಲು ಆದೇಶಿಸುತ್ತಾನೆ. ಇದನ್ನು ಕೇಳಿದ ಮಕ್ಕಳು ಹೌಹಾರುತ್ತಾರೆ. ಕೈಯಲ್ಲಿದ್ದ ತುತ್ತನ್ನು ಯಾರೋ ಕಸಿದುಕೊಂಡಂತೆ ಅನಿಸಿ ಧನಿಕರ ಮೇಲೆ ಕೋಪ ಬರುತ್ತದೆ. ಆದರೆ ಏನೂ ಮಾಡದಷ್ಟು ಅಶಕ್ತರು. ಮಕ್ಕಳು ತಾವೇ ಪ್ರೀತಿಯಿಂದ ಬೆಳೆಸಿದ ಗಿಡಗಳನ್ನು ಕಡಿಯುವಾಗ ಅನುಭವಿಸಿದ ಸಂಕಟ ಹತಾಶ ಭಾವನೆಗಳು ವೀಕ್ಷಕರ ಕಣ್ಣಲ್ಲಿ ನೀರೂರುವಂತೆ ಮಾಡುತ್ತವೆ. ಚಿತ್ರ ಮುಗಿದರೂ ಅದು ಬೀರಿದ ಪರಿಣಾಮದಿಂದ ಪ್ರೇಕ್ಷಕ ಹೊರ ಬರಲು ತುಸು ಸಮಯವೇ ಬೇಕಾಗುತ್ತದೆ. ಮೂಲ ಕಥೆಯನ್ನು ಓದುವ ಅಭಿರುಚಿ ಕುದುರಿಸುವ ಕೆಲಸವನ್ನು ಇಂಥ ಚಿತ್ರಗಳು ಮಾಡುತ್ತವೆ. ಚಂದನ ವಾಹಿನಿಗೆ ಧನ್ಯವಾದಗಳು.

—ಕೆ.ಪಿ. ರಾಮಗುಂಡಿ. ಬೈಲಹೊಂಗಲ

## ಮೆಚ್ಚಿದೆ ಕಿಚ್ಚನ ಜರ್ನಿ

ಕಿಚ್ಚ ಸುದೀಪ್ ಅವರ ಇಪ್ಪತ್ತೈದು ವರ್ಷಗಳ ಸಿನಿಮಾ ಜರ್ನಿ ಹೆಚ್ಚು ಅಬ್ಬರಿಸಲೇ ಇಲ್ಲ. ಹೀಗಿರುವಾಗ ಖಾಸಗಿ ಚಾನೆಲ್ ಕಲರ್ಸ್ ಕನ್ನಡ ಅವರ ಸಿನಿ ಜರ್ನಿಯ ಝಲಕ್ ತೋರಿಸಿತು. ಒಬ್ಬ ಪ್ರತಿಭಾವಂತ ಕಲಾವಿದನಿಗೆ ಕೊಟ್ಟ ಗೌರವ ಮನ ಮುಟ್ಟಿತಾದರೂ, ಚಿತ್ರರಂಗದವರು ಮಾತ್ರ ಕಿಚ್ಚನ ಸಿನಿ ಜರ್ನಿಯನ್ನ ಸಂಭ್ರಮಿಸುವಂತೆ ಕಾಣುತ್ತಿಲ್ಲ. ಈ ಚಾನೆಲಿನ ಕಾರ್ಯಕ್ರಮವನ್ನು ಸುದೀಪ್ ನಿರೂಪಣೆ ಮಾಡುತ್ತಿದ್ದಾರೆ ಅನ್ನುವ ಕಾರಣಕ್ಕಾದರೂ ಇಷ್ಟಾದರೂ ಸಾಧ್ಯ ಆಯಿತು.

—ಆಕಸ್ಮಿತ ತಲವಡಗ,ತೀರ್ಥಹಳ್ಳಿ

## ಹೊಸಬರಿಗೆ ಉತ್ತೇಜನ

ಕಲರ್ಸ್ ಕನ್ನಡದ 'ಅನುಬಂಧ' ಪ್ರಶಸ್ತಿ ಪ್ರದಾನ ಕಾರ್ಯಕ್ರಮ ಚೆನ್ನಾಗಿ ಮೂಡಿಬಂದಿದೆ. ಪ್ರತಿ ತಂಡವೂ ಭಿನ್ನವಾಗಿ ಕಂಗೊಳಿಸಿವೆ. ಈ ವರ್ಷ ಹೊಸ–ಹೊಸ ಧಾರಾವಾಹಿಗಳನ್ನು ಪರಿಗಣಿಸಿರುವುದು ಬಹಳ ಸಂತೋಷದ ವಿಚಾರ. ಇದರಿಂದ ನವ ಕಲಾವಿದರಿಗೆ ಉತ್ತೇಜನ ಸಿಕ್ಕಂತಾಗುತ್ತದೆ. ಕಾರ್ಯಕ್ರಮ ನಡೆಸಿಕೊಡುವವರೂ ಸಹ ಚೆನ್ನಾಗಿ ತಮ್ಮ ಕಾರ್ಯ ಮಾಡುತ್ತಿದ್ದಾರೆ. ಜನಪ್ರಿಯ ವ್ಯಕ್ತಿಗಳಿಂದ ಪ್ರಶಸ್ತಿಗಳನ್ನು ಕೊಡಿಸುತ್ತಿರುವುದೂ ಸಹ ಸಂತೋಷದ ವಿಚಾರ. ಪ್ರತಿ ವರ್ಷ ಈ ಕಾರ್ಯಕ್ರಮ ಹೀಗೇ ನಡೆಯಲಿ. ಆದರೆ ಎಲ್ಲರೂ ಕೊರೊನಾ ಮರೆತಂತಿದೆ.

—ಶಾರದಾ ಎಸ್.ಎಸ್., ಬೆಂಗಳೂರು

## ಅತಿರೇಕ ಅಕ್ಷಮ್ಯ

ಝೀ ವಾಹಿನಿಯಲ್ಲಿ 'ಸತ್ಯ' ಎಂಬ ಧಾರಾವಾಹಿ ಪ್ರಸಾರವಾಗುತ್ತಿದೆ. ಅದರ ಒಂದು ದೃಶ್ಯದಲ್ಲಿ, ತಾಯಿ ಮಗನ ಶಾಲಾ ಶುಲ್ಕ ಒಮ್ಮೆಯೇ ಕಟ್ಟಲು ತೊಂದರೆಯಾಗಿ ಶಾಲಾ ಮುಖ್ಯಸ್ಥೆಯನ್ನು ಭೇಟಿಯಾಗುತ್ತಾರೆ. ಆಕೆ ಅಸಡ್ಡೆ ತೋರಿಸುತ್ತಾ ಆ ತಾಯಿಯನ್ನು ನಿಂದಿಸುತ್ತಾರೆ. ಪರಿಪರಿಯಾಗಿ ತಾಯಿ ತನ್ನ ಕಷ್ಟ ಹೇಳಿಕೊಂಡು ಬೇಡುತ್ತಿದ್ದಾರೆ. ಕೊನೆಗೆ ಕಾಲಿಗೆ ಬಿದ್ದೂ ಕೇಳುವಾಗ ತಳ್ಳಿ, ಸೆಕ್ಯುರಿಟಿ ಕರೆದು ತಾಕೀತು ಮಾಡುತ್ತಾರೆ. ಎಲ್ಲೂ ಇಂತಹ ಘಟನೆ ನಡೆಯಲು ಸಾಧ್ಯ ಇಲ್ಲ. ಇಂತಹ ಅತಿರೇಕ ಅಕ್ಷಮ್ಯ.

—ಕೆ. ಹೊನ್ನಪ್ಪ, ಮುಖ್ಯ ಶಿಕ್ಷಕರು

## ಕುತಂತ್ರ ಅಳಿಯಲಿ

ಕಲರ್ಸ್ ಕನ್ನಡದ 'ನಮ್ಮನೆ ಯುವರಾಣಿ' ಪುನರಾವರ್ತನೆ ಆಗುತ್ತಿದೆ. ಮನೆಯ ದೊಡ್ಡ ಸೊಸೆ ತನ್ನ ಎಲ್ಲಾ ತಪ್ಪುಗಳನ್ನು ಪುನಃ ಪುನಃ ಮಾಡುತ್ತಲೇ ಹೋಗುವುದು ತೀರ ಅಸಂಬದ್ಧ. ಆರಂಭ ಇದ್ದ ಮೇಲೆ ಅಂತ್ಯ ಇರಲೇಬೇಕು ಅಲ್ಲವೇ? ವೀಕ್ಷಕ ಕೇಳಿದನ್ನೇ ಕೇಳಿ ಕೇಳಿ ಸಹನೆ ಕಳೆದುಕೊಳ್ಳಬಾರದು. ಕಥೆಯಲ್ಲಿ ಕುತಂತ್ರ ಅಳಿಯಬೇಕು ಇಲ್ಲ ಪಾತ್ರವೇ ಇಲ್ಲದಂತಾಗಬೇಕು.

ಧಾರಾವಾಹಿಗಳ ಮೆಗಾ ಎಂಬ ಪೂರ್ವ ಪ್ರತ್ಯಯ ತೆಗೆಯಬೇಕು. ಕನಿಷ್ಠ ಕಂತುಗಳ ನಿರ್ಬಂಧದಲ್ಲಿ ಅಂತ್ಯಗೊಳಿಸಿದರೆ ತುಂಬ ಚೆನ್ನಾಗಿರುತ್ತದೆ. ಹೊಸ ಕಥೆ, ಹೊಸ ನಟರು ಮತ್ತಷ್ಟು ಪ್ರವರ್ಧಮಾನಕ್ಕೆ ಬರುತ್ತಾರೆ.

—ಎನ್.ಎಸ್. ಚಂದ್ರಶೇಖರ್, ಬೆಂಗಳೂರು